**ಕೊಲಲಲ್ಲವ್ರೋ ಬದುಕಿ- | ಕಿಸಲು ನರರು ಹುಟ್ಟಿದುದು! |ಮೊಲೆಹಾಲು ಕೊಲಲಲ್ಲ | ಕೊಲಲೆಂತೊ ಈ ಬುದ್ಧಿ? ||**

**26-1-42 ರಾತ್ರಿ 10.38**

ಇಂದು ಸ್ವಾತಂತ್ರ್ಯ ದಿನ. ಕಾಂಗ್ರೆಸ್ ಕಮಿಟಿಯ ಕಚೇರಿಗೆ ನೂಲಲು ಯಾರೂ ಬಂದಿರಲಿಲ್ಲ. ಕಚೇರಿಯ ಕಾರ್ಯಕರ್ತರಾದರೂ ನೂಲಬೇಕಲ್ಲವೆ? ಅವರೂ ನೂಲಲಿಲ್ಲ. ಸಾಯಂಕಾಲದ ಸಭೆಯಲ್ಲಿ ಉದ್ದುದ್ದವಾದ ಮತ್ತು ಆವೇಶಪೂರ್ಣ ವಾದ ಮಾಡುವವರು - ಜನರನ್ನು ನೂಲಲು ಕರೆವವರು - ತಾವೇ ನೂಲಲು ಒಲ್ಲರು! ಇದು ಸತ್ಯದ ಭಕ್ತಿಯೆ?

ನಾನು ಆ ಕಚೇರಿಯಲ್ಲಿ ಒಂದು ಹಂಜಿಯನ್ನು ಟಕಲಿಯಿಂದ ನೂತೆನು.

ಇಷ್ಟು ಹೊತ್ತು 'ಹರಿಜನ' ಪತ್ರಿಕೆಯನ್ನು ಓದಿದೆನು. ಹೋದ ವಾರದಿಂದ ಅದು ಮತ್ತೆ ಪ್ರಕಟವಾಗತೊಡಗಿದೆ - ನನ್ನ ಮತ್ತು ನನ್ನಂತಹ ಲಕ್ಷಾವಧಿ ಜನಕ್ಕೆ ಹರಿಜನವು ಸಾತ್ವಿಕ ಅನ್ನವು. ದೇವಾ! ನನ್ನ ದೇಶವು ಸ್ವತಂತ್ರವಾಗುವುದು ಎಂದು?

**29-1-42 ರಾತ್ರಿ 8.50**

ಇಂದು ಶಾಲೆಯಲ್ಲಿ ಶ್ರೀ ಪಟವರ್ಧನ ಇವರ ಕೀರ್ತನವು. ಡಾ. ಪಟವರ್ಧನರು ದೇಶವತ್ಸಲರು, ಸ್ವಾರ್ಥತ್ಯಾಗಿಗಳು. ವ್ರತಿಗಳು, ದೇಶಕ್ಕೋಸುಗ ಸವೆವವರು. ತತ್ವನಿಷ್ಠರು, ವಿದ್ವಾಂಸರು, ಪ್ರೇಮಿಗಳು.

ಹಿರಿಯರೆಂಬರು ಕಾಲಕಸವಲ್ಲ. ಅವರ ಆಶೀರ್ವಾದ ಪ್ರಭಾವದಿಂದ ಕಿರಿಯರಿಗೆ ಬಹುಮಟ್ಟಿಗೆ ಸುಖವು. ಹಿರಿಯರ ವಿಷಯದಲ್ಲಿ ಆದರವನ್ನು ತಳೆಯದವನು ಆತ್ಮಹಿತವನ್ನು ಅರಿಯದ ಮೂಢನು. ಹಿರಿಯರು ದೇವಸ್ವರೂಪರು. ಅವರನ್ನು ಬಿರುನುಡಿಗಳಿಂದ ನೋಯಿಸುವವನು ಪಾಪಕ್ಕೆ ಗುರಿಯಾಗುವನು.

**31-1-42 ರಾತ್ರಿ 9.40**

ಇಂದು ಶ್ರಮ ಬಹಳ. ನಿನ್ನೆ ಮತ್ತು ಇಂದು 'ಸೊಗಸಿನ ಓದು' ಮಾಲೆಯ ವಿಷಯದಲ್ಲಿ ಚರ್ಚೆಯಾಯ್ತು. ಮತ್ತೆ ನಾನು ಪಾಠಗಳನ್ನು ಬರೆಯಬೇಕಾಗಿ ಬಂದಿದೆ. 'ಶ್ರೀರಾಮ ಭರತರ ಸಮಾಗಮ'ದ ಕವಿತೆಯನ್ನು ಕೊಟ್ಟೆನು.

ಬರುತ್ತಿರುವ ಪರಿಸ್ಥಿತಿಗಳಿಗೆ ಶಾಂತಚಿತ್ತದಿಂದ ತಲೆಗೊಟ್ಟು ನಿಲ್ಲಲು ಕಲಿಯಬೇಕು. ಪರಿಸ್ಥಿತಿಗಳು ಸುಖದವಿರಲಿ, ದುಃಖದವಿರಲಿ ಸ್ಥೈರ್ಯವನ್ನು ಕಳೆದು ಕೊಳ್ಳಬಾರದು.

**2-2-42 ರಾತ್ರಿ 9.55**

ಇಂದು ನನ್ನ ವರ್ಗದ ವಿದ್ಯಾರ್ಥಿಗಳ ತಪ್ಪಿಗಾಗಿ ನನಗೆ ರಾತ್ರಿ ಊಟವಿಲ್ಲ. ವಿದ್ಯಾಮಂದಿರದಲ್ಲಿಯ ವಾತಾವರಣವು ಇತ್ತಿತ್ತಲಾಗಿ ಪವಿತ್ರವಾಗಿರುವುದಿಲ್ಲ. ಅಧ್ಯಾಪಕರಲ್ಲಿ ಇರಬೇಕಾದ ಗಾಂಭೀರ್ಯ, ಸಂಯಮ, ಪಾವಿತ್ರ್ಯ ಇರುವುದಿಲ್ಲ. ಇದರಿಂದ ವಿದ್ಯಾರ್ಥಿಗಳಲ್ಲಿ ಈ ಗುಣಗಳು ಬರಬೇಕೆಂತು?

ಶ್ರೀಹರಿ, ಆತ್ಮವಿಕಾಸಕ್ಕೆ ಆವಶ್ಯಕವಾದ ವಾತಾವರಣವು ನಮ್ಮ ಶಾಲೆಯಲ್ಲಿ ಹುಟ್ಟುವಂತೆ ಮಾಡಯ್ಯ!

**4-2-42 ರಾತ್ರಿ9.53**

ಗೋಠೆ ಕೇಶವರಾಯರು ನನ್ನ ಮನೆಯ ಕಟ್ಟಡದ ವಿಷಯದಲ್ಲಿ ವಹಿಸಬೇಕಾದ ಆಸ್ಥೆಯನ್ನು ವಹಿಸಿಲ್ಲ. ಎಷ್ಟು ಸಲ ಹೇಳಿ ನೋಡಿದೆ. ಅವರ ವೃತ್ತಿಯಲ್ಲಿ ಬದಲು ಆಗಲಿಲ್ಲ. ಮನೆಯ ಕೆಲಸವು ಅತ್ಯಂತ ಮಂದ ಗತಿಯಿಂದ ಸಾಗಿದೆ. ಇದರಿಂದ

ನನ್ನ ಮನಸ್ಸಿಗೆ ಬಹು ವ್ಯಥೆ. ಇದೆಲ್ಲವನ್ನು ಅವರಿಗೆ ಸೂಚಿಸಿದೆನು. ಆದರೂ ಬೇಗನೆ ಕೆಲಸವನ್ನು ಮುಗಿಸಿ ಕೊಡಬೇಕೆಂಬ ಆಸ್ಥೆ ಅವರಿಗೆ ಆಗಲೊಲ್ಲದು. ಇಂದಿನಿಂದ ನಾನು ಸತ್ಯಾಗ್ರಹವನ್ನು ಆರಂಭಿಸಬೇಕಾಯ್ತು. ಈಗ ಆರಂಭಿಸಿದ ಸತ್ಯಾಗ್ರಹದ ರೂಪವು ಒಂದು ಹೊತ್ತು ಊಟವು. ಮನೆಯ ಕೆಲಸವು ಮುಗಿವವರೆಗೆ ಒಂದು ಹೊತ್ತು ಊಟವು. ಶ್ರೀಹರಿ, ಇದಕ್ಕೂ ಹೆಚ್ಚಿನ ತೀಕ್ಷ್ಣ ರೂಪದ ಸತ್ಯಾಗ್ರಹವನ್ನು ಅವಲಂಬಿಸುವ ಪ್ರಸಂಗವನ್ನು ತಪ್ಪಿಸು.

ಇಂದು ಮುಂಜಾನೆ ಕಟ್ಟಡದ ಕೆಲಸವು ನಡೆದಿರಲಿಲ್ಲ. ಮಧ್ಯಾಹ್ನದ ತರುವಾಯ ಇಬ್ಬರು ಗೋಡೆಕಾರರು ಸ್ವಲ್ಪ ಕೆಲಸವನ್ನು ಮಾಡಿದರು. ಬಡಿಗರ ಕೆಲಸವೂ ಅತ್ಯಲ್ಪ. ಬಾವಿಯ ಕೆಲಸವು ಹದಿನೈದು ದಿನಗಳ ತರುವಾಯದಲ್ಲಿ ಇಂದು ಪ್ರಾರಂಭವಾಗಿದೆ. ಶ್ರೀಹರಿ, ಎಲ್ಲವೂ ನಿನ್ನನ್ನು ಕೂಡಿದೆ.